

ಒಂದು ಹಳ್ಳಿಗೆ ಹೋಗಿ ತಲುಪಿದ್ದೆವು. ಅಚ್ಚರಿ ಎಂದರೆ ಇದು ರಾಜಸ್ಥಾನ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶ ಮೂರು ರಾಜ್ಯಗಳು ಸೇರುವ ಒಂದು ಜಾಗ. ಸಾರಸ್ ಚಿತ್ರೀಕರಣ ಮುಗಿದ ಮೇಲೆ ಅನಂತಮೂರ್ತಿಗಳು ಹೇಳಿ ಕೆರಳಿಸಿದ್ದ ಚಂಬಲ್ ಪಯಣದ ಪ್ಲಾನು ತಯಾರಾಯಿತು. ನಾವು ಒಟ್ಟು ಎಂಟು ಜನ ಎರಡು ಕಾರು ಹಿಡಿದು ಚಂಬಲ್ ಕಡೆ ಹೊರಟೆವು. ಮಧ್ಯಾಹ್ನದ ಹೊತ್ತಿಗೆ ಡಿಯೋರಿ ಮೊಹೆರಾ ಎಂಬ ಸ್ಥಳಕ್ಕೆ ಬಂದೆವು.

ಅಸಲಿಗೆ ಚಂಬಲ್ ಎಂಬುದು ಸುಂದರವಾಗಿ ಹರಿಯುವ ಒಂದು ನದಿಯ ಹೆಸರು. ನದಿಯು ಹರಿಯುವ ಈ ಜಾಗದಲ್ಲಿ ಎತ್ತರದ ಮಣ್ಣಿನ ಗುಡ್ಡಗಳಿದ್ದಾವೆ. ಯಾವ ಕ್ಷಣಕ್ಕಾದರೂ ಕುಸಿದು ಬೀಳುವಷ್ಟು ಶಿಥಿಲವಾಗಿರುವ ನದಿಯ ಇಕ್ಕೆಲದ ಈ ಗುಡ್ಡಗಳನ್ನು ಚಂಬಲ್ ಪ್ರವಾಹ ಅವಕಾಶ ಸಿಕ್ಕಾಗೆಲ್ಲಾ ಜಗಿದುಹಾಕಿದೆ. ಈ ನದಿಯ ಮೇಲೆ ತೆಪ್ಪ ಹಿಡಿದು ಅಲೆದಾಡಿದರೆ ಇಂಡಿಯನ್ ಸ್ಕಿಮ್ಮರ್ ಎಂಬ ಅಪರೂಪದ ಪಕ್ಷಿ, ಅಪೂರ್ವ ಜಾತಿಯ ಘಾರಿಯಾಲ್ ಮೊಸಳೆ ಮತ್ತು ಕೆಂಪು ಕಿರೀಟ ಛಾವಣಿಯ ಆಮೆಗಳು ಸಿಗುತ್ತವೆ ಎಂದು ಲೋಕೇಶ್ ಹೇಳುತ್ತಿದ್ದ. ಗಣಿಗಾರಿಕೆಯಿಂದ ತತ್ತರಿಸಿರುವ ಚಂಬಲ್ ನದಿಗೆ ಬಂದಾಗ ಉರಿ ಬಿಸಿಲು ಇನ್ನೂ ಬಾಕಿ ಉಳಿದಿತ್ತು.

ಸ್ಥಳೀಯ ದೋಣಿಗಾರರ ಜೊತೆ ಬಾಡಿಗೆ ಮಾತಾಡಿಕೊಂಡು ಎರಡು ಬೋಟು ಹಿಡಿದೆವು. ಡೀಸೆಲ್ಲಿನಿಂದ ನಡೆಯುವ ಆ ಬೋಟುಗಳ ಶಬ್ದದ ಆರ್ಭಟಕ್ಕೆ ಹಕ್ಕಿಗಳು ದಿಕ್ಕಾಪಾಲಾಗಿ ಓಡುತ್ತಿದ್ದವು. ನಾವು ಪರಸ್ಪರ ಮಾತಾಡಿಕೊಳ್ಳಲೂ ಅವಕಾಶ ಕೊಡದೆ ಇಂಜಿನ್ ಒಂದೇ ಸಮ ಅರಚಾಡುತ್ತಿತ್ತು. ಇಷ್ಟು ಶಬ್ದವಾದರೆ ಕಷ್ಟ. ಬೋಟನ್ನು ನಿಲ್ಲಿಸಿ ಬಿಡು. ಹದವಾಗಿ ಅದು ನೀರು ಹರಿವಿನ ಕಡೆ ತೇಲಲಿ. ಸಿಕ್ಕಷ್ಟು ಪಕ್ಷಿಪಟ ತೆಗೆಯುತ್ತೇವೆ ಎಂದು ಅಂಬಿಗನಿಗೆ ಕಿರುಚಿ ಹೇಳಿದೆವು. ಡೀಸೆಲ್ ಉಳಿಸುವ ನಮ್ಮ ಮಾತು ಅವನಿಗೆ ಲಾಭದಾಯಕವಾಗಿ ಕಂಡು ಒಪ್ಪಿದ.

ನೀರಿನ ಮೇಲೆ ಹೊಯ್ದಾಡುವ ಬೋಟಿನ ಮೇಲೆ ನಿಂತು ಪಟ ತೆಗೆಯುವುದು ಭಾರೀ ಕಷ್ಟದ ಕೆಲಸ. ನಮಗೆ ಬೋಟಿನ ಮೇಲೆ ಓಡಾಡುವಷ್ಟು ಜಾಗವಿತ್ತು. ಹಕ್ಕಿಗಳು ಹತ್ತಿರ ಬಂದಾಗ ಚಿತ್ರ ತೆಗೆಯುತ್ತಿದ್ದವು. ಬೋಟು ನಿಂತ ಕೆಲವು ಕಡೆ ಸಣ್ಣ ನಡುಗಡ್ಡೆಗಳಿದ್ದು ಅಲ್ಲಿ ಅಗಲಗಣ್ಣಿನ ಸುಂದರ ಕಲ್ಲುಗೊರವ ಪಕ್ಷಿ ನಿಂತಿತ್ತು. ಅದು ಹಾರುವುದೋ? ಬೇಡವೋ? ಎಂದು ಮೀನಮೇಷ ಎಣಿಸುತ್ತಾ ಗೊಂದಲದಲ್ಲಿತ್ತು. ಕೊಂಚ ಧೈರ್ಯ ವಹಿಸಿ ಹತ್ತಿರ ಹೋದರೂ ಸುಮ್ಮನಿತ್ತು. ಹೀಗೆ ಎಗ್ಗಿಲ್ಲದೆ ಪೋಜು ಕೊಡುವ ಪಕ್ಷಿಗಳ ಪಟ